DW : 1

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## **OS No**.29/2013 **AND** 51/2016

ದಿನಾಂಕಃ 27.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿಸವಾಲು ವಾದಿ ಪರ ಶ್ರೀ N.R.K. ವಕೀಲರಿಂದಃ**

ನಾನು ಸುಮಾರು 26 ವರ್ಷಗಳಿಂದ ಸರ್ಕಾರಿ ಸೇವೆಯಲ್ಲಿದ್ದೇನೆ. ಮೊದಲು ನಾನು ಪುತ್ತೂರಿಗೆ ಬರುವ ಸುಳ್ಯದಲ್ಲಿ ಇದ್ದೆ. ದಿಃ17.10.2009 ರಂದು ನಾನು ಪುತ್ತೂರಿನಲ್ಲಿಯೇ ಜ್ಯೂನಿಯರ್ ಇಂಜಿನೀಯರ್ ಆಗಿದ್ದೆ. ನನಗಿಂತ ಮೇಲಿನ ಹಂತದಲ್ಲಿ ಸೀನಿಯರ್ ಇಂಜಿನಿಯರ್ ಇರುವುದಿಲ್ಲ, Chief officer ಇರುತ್ತಾರೆ. Chief officer ಪುರಸಭೆಗೆ ಸಂಬಂಧಪಟ್ಟ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಟೌನ್ ನಲ್ಲಿ ಏನಾದರೂ ಪ್ರಕ್ರಿಯೆ ನಡೆಯಬೇಕಾದರೆ ಸಭೆಯಲ್ಲಿ ಕೌನ್ಸಿಲರ್ ಗಳ ಮುಂದೆ ಇಡುತ್ತಾರೆ ಎಂದರೆ ಸರಿ. ಸಭೆಯಲ್ಲಿ ರೆಸಲ್ಯೂಶನ್ ಪಾಸ್ ಆಗುತ್ತದೆ ಎಂದರೆ ಸರಿ. ನಂತರ ಸದರಿ ಠರಾವಿನ ಪ್ರತಿಯನ್ನು ಸಂಬಂಧಪಟ್ಟವರಿಗೆ ಕಳುಹಿಸುತ್ತಾರೆ ಎಂದರೆ ಸರಿ. ವಾದಿಯ ಪ್ರಕರಣದಲ್ಲಿ ಸೆಪ್ಟೆಂಬರ್ 2009 ರಲ್ಲಿ ರೆಸಲ್ಯೂಶನ್ ಮಾಡಿದ್ದು, ದಿನಾಂಕ ನೆನಪಿಲ್ಲ. ಸದರಿ ರೆಸಲ್ಯೂಶನ್ ನ್ನು ವಾದಿಯ ಕಟ್ಟಡದ ಸ್ಟ್ಯಾಬಿಲಿಟಿ ಇಲ್ಲದೇ ಇರುವುದರಿಂದ ಅದನ್ನು ತೆರವುಗೊಳಿಸುವಂತೆ ಪಾಸ್ ಮಾಡಿರುತ್ತೇವೆ. ಅದಕ್ಕೆ ಮೊದಲೂ ಕೂಡಾ ರೆಸಲ್ಯೂಶನ್ ಪಾಸ್ ಮಾಡಿರಬಹುದು ನನಗೆ ನೆನಪಿಲ್ಲ. ಸದರಿ ರೆಸಲ್ಯೂಶನ್ ನ್ನು ನಾನು ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ನೆನಪಿಲ್ಲ. ಪ್ರತಿವಾದಿ ಪರವಾಗಿ ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ ಅದರಲ್ಲಿ ರೆಸಲ್ಯೂಶನ್ ಇರುವುದಿಲ್ಲ. ಈ ರೀತಿ ರೆಸಲ್ಯೂಶನ್ ಮಾಡಬೇಕಾದರೆ ಅದಕ್ಕೂ ಮೊದಲು ನಾವು 100 ವರ್ಷ ಹಳೆಯ ಕಟ್ಟಡಗಳ ಅಸೆಸ್ ಮೆಂಟ್

DW : 1

ಮಾಡಿರುತ್ತೇವೆ. ಸದರಿ ರಿಪೋರ್ಟ್ ನ್ನು ನ್ಯಾಯಾಲಯಕ್ಕೆ ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಯಾವುದೋ ಒತ್ತಡಕ್ಕೆ ಮಣಿದು ನಾವು ವಾದಿಗಳ ಕಟ್ಟಡವನ್ನು ಬೀಳಿಸಿರುತ್ತೇವೆ ಎಂದರೆ ಸರಿಯಲ್ಲ. ಪುತ್ತೂರಿನಲ್ಲಿ 50 ಕ್ಕೂ ಹೆಚ್ಚು 100 ವರ್ಷಕ್ಕಿಂತ ಹಳೆಯ ಕಟ್ಟಡಗಳ ಹಳೆಯ ಕಟ್ಟಡಗಳಿವೆ ಎಂದರೆ ಸರಿಯಲ್ಲ. ಬೆರಳೆಣಿಕೆಯಷ್ಟಿವೆ, ನಿಖರ ಸಂಖ್ಯೆ ಗೊತ್ತಿಲ್ಲ. ಸದರಿ ಕಟ್ಟಡಗಳನ್ನು ಪರಿಶೀಲಿಸಿ ನಾವು ತೆರವುಗೊಳಿಸಿದ್ದೇವಾ ಎಂದರೆ ಮಾಲಿಕರೇ ತೆರವುಗೊಳಿಸಿರುತ್ತಾರೆ ಎನ್ನುತ್ತಾರೆ. ಹಾಗೆ ತೆರವುಗೊಳಿಸಿದ ಮಾಲಿಕರು ಯಾರೆಂದರೆ ನಿಖರವಾಗಿ ನನಗೆ ನೆನಪಿರುವುದಿಲ್ಲ. ದರ್ಬೆಯ ಕೆಳಗೆ ಮರದ ಮಿಲ್ಲಿನ ಹತ್ತಿರ ಇರುವ 2 ಬಿಲ್ಡಿಂಗ್ ನ ಮಾಲಿಕರು ಅವರೇ ಹಳೆಯ ಕಟ್ಟಡವನ್ನು ತೆರವುಗೊಳಿಸಿರುತ್ತಾರೆ. ಸದರಿಯವರು ಹೊಸ ಕಟ್ಟಡ ಕಟ್ಟಲು ತೆರವುಗೊಳಿಸಿರುತ್ತಾರೆ ಎಂದರೆ ಹೊಸ ಕಟ್ಟಡ ಕಟ್ಟಿರುವುದಿಲ್ಲ.

ವಾದಿ ದಿಃ11.09.2009 ರಂದು ನಿಡಿ22 ರಂತೆ ಪುರಸಭೆಗೆ ಪತ್ರ ಬರೆದಿರುತ್ತಾರೆ ಎಂದರೆ ಸರಿ. ಅದರ ಬಾಬ್ತು ನಾವು ಅನುಮತಿಯನ್ನು ನೀಡಿರುವುದಿಲ್ಲ. ಹೊಸ ಕಟ್ಟಡ ಕಟ್ಟಲು ಅನುಮತಿ ಕೇಳಿದ್ದರಿಂದ ನಾವು ಅನುಮತಿ ನೀಡಿರುವುದಿಲ್ಲ. ಕಟ್ಟಡ ದುರಸ್ತಿ ಆಗದೇ ವ್ಯಾಪಾರ ವಹಿವಾಟ ಮಾಡಬಾರದು ಎಂದು ನಾವು ಪರವಾನಗಿಯನ್ನು ನವೀಕರಿಸಿರುವುದಿಲ್ಲ. ನಾವಾಗಿಯೇ ಕಟ್ಟಡ ಬೀಳಿಸಿರುವುದಿಲ್ಲ, ನಾವು ವಾದಿಗೆ ಕಟ್ಟಡ ಬೀಳಿಸಲು ಸಹಾಯ ಮಾಡಿರುತ್ತೇವೆ. ನಿಪಿ14 ನ್ನು ನಾವು ಕಳುಹಿಸಿರುತ್ತೇವೆ. ನಿಪಿ15 ರ ಪ್ರಕಾರ ನಾವು ಅಂಗಡಿಯನ್ನು ಮುಟ್ಟುಗೋಲು ಹಾಕಿಕೊಂಡಿರುತ್ತೇವೆ ಎಂದರೆ ಸರಿ. ದಿಃ09.10.2009 ರ ನಿಪಿ16 ರಂತೆ ತಿಳುವಳಿಕೆ ನೋಟೀಸ್ ನ್ನು ನೀಡಿ ವಾದಿಗೆ ನೀವೇ ಕಟ್ಟಡವನ್ನು ತೆರವುಗೊಳಿಸಿ, ಇಲ್ಲದಿದ್ದರೆ ನಾವು ತೆರವುಗೊಳಿಸುತ್ತೇವೆ ಎಂದು ಹೇಳಿರುತ್ತೇವೆ. ವಾದಿಗೆ ಕಟ್ಟಡವನ್ನು ಬೀಳಿಸಿ ಹೊಸ ಕಟ್ಟಡ ಕಟ್ಟಲು ನಿಪಿ22 ರಂತೆ ಅವರಿಗೆ ಅನುಮತಿ ನೀಡಿಲ್ಲ ಎಂದರೆ ಮಾತುಕತೆ ಮಾಡಿ ಹೊಸ ಕಟ್ಟಡಕ್ಕೆ ನಾವು ಅನುಮತಿ ನೀಡಲು ತಯಾರಿದ್ದೆವು, ಹಳೆಯ ಕಟ್ಟಡದ ಜಾಗದಲ್ಲಿ ಯಾವುದೇ ಸೆಟ್ ಬ್ಯಾಕ್ ಬಿಡದೇ ಅದೇ ಜಾಗದಲ್ಲಿ ಹೊಸ ಕಟ್ಟಡ

DW : 1

ಕಟ್ಟಲು ಇಚ್ಛಿಸಿದ್ದರಿಂದ ನಾವು ಅನುಮತಿ ನೀಡಿರುವುದಿಲ್ಲ. ನನಗೆ ವಾದಿಯ ಕಟ್ಟಡವನ್ನು ಸಂಪೂರ್ಣವಾಗಿ ಬೀಳಿಸಿ ಅಲ್ಲಿ ಯಾವುದೇ ಬೇರೆ ಕಟ್ಟಡ ಬರಬಾರದು ಎಂಬ ಉದ್ದೇಶ ಇತ್ತು ಎಂದರೆ ಸರಿಯಲ್ಲ.

ಸದರಿ ಸಮಯ 2ನೇ ಪ್ರತಿವಾದಿ ರಾಜೇಶ್ ಬನ್ನೂರು ರವರು ಅಧ್ಯಕ್ಷರಾಗಿದ್ದರು ಎಂದರೆ ಸರಿ. 2 ಮತ್ತು 20ನೇ ಪ್ರತಿವಾದಿ ರಿಯಲ್ ಎಸ್ಟೇಟ್ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಸದರಿ ಇಬ್ಬರಿಗೂ ಈ ಆಸ್ತಿಯನ್ನು ಖರೀದಿಸುವ ಇಚ್ಛೆ ಇತ್ತು ಎಂದರೆ ಗೊತ್ತಿಲ್ಲ. ಅವರಿಬ್ಬರ ಒತ್ತಡದಿಂದ ಬಾಕಿ ಸದಸ್ಯರೂ/ಉಳಿದ ಪ್ರತಿವಾದಿಗಳ ಒತ್ತಡದಿಂದ ನಾವು ನಮ್ಮ ಮುನ್ಸಿಪಾಲಿಟಿಯಿಂದ ಕಟ್ಟಡವನ್ನು ತೆರವುಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕಟ್ಟಡ ಬೀಳಿಸಲು ಸುಮಾರು 10 ತಿಂಗಳ ಮೊದಲು ವಾದಿಯ ವಕೀಲರು ನಿಪಿ8 ರಂತೆ ನೋಟೀಸು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಟ್ಟಡವನ್ನು ಬೀಳಿಸುವ ಮೊದಲು ದಿಃ09.10.2009 ರಂದು ವಾದಿಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ಕೇಶವ ಭಟ್ ಎಂಬ ವಕೀಲರು ಮೂಲಕ ಕೇವಿಯೆಟ್ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿಯವರಿಗೆ ಸದರಿ ರಿಟ್ ಅರ್ಜಿಯ ದಾಖಲೆಗಳನ್ನು ಕೊಡಲಾಗಿತ್ತು ಎಂದರೆ ಗೊತ್ತಿಲ್ಲ. ಲಿಖಿತ ಹೇಳಿಕೆಯ ಪ್ಯಾರಾ 14 ರ ಕೊನೆಯ ಸಾಲಿನಲ್ಲಿ ನಾವು ಹೇಳಿರುವ ಅಂಶ ದಿಃ17.10.2009 ರಂದು ಅವರೇ ಕಟ್ಟಡವನ್ನು ಬೀಳಿಸಿದರು ಎಂದು ನಮೂದು ಇರುತ್ತದೆ. ವಾದಿಗಳು ಬೀಳಿಸಿರುತ್ತಾರೆ ಎಂದು ಲಿಖಿತ ಹೇಳಿಕೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪುತ್ತೂರು ಪುರಸಭೆಯವರು ದಿಃ ದಿಃ17.10.2009 ರಂದು ವಾದಿಯ ಕಟ್ಟಡವನ್ನು ಬೀಳಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ Good faith ನಿಂದ ಬೀಳಿಸಿರುತ್ತೇವೆ ಎಂದು ಇರುತ್ತದೆ ಎಂದರೆ ಬೆರಳಚ್ಚಿನಲ್ಲಿ ತಪ್ಪಾಗಿರುತ್ತದೆ. ಈ ವಿಷಯಗಳನ್ನು ಮುಖ್ಯಾಧಿಕರುಗಳು ನೋಡಿಕೊಳ್ಳುವುದರಿಂದ ನನಗೆ ಸರಿಯಾಗಿ ಗೊತ್ತಿಲ್ಲ. ನನಗೆ ಎಲ್ಲ ವಿಷಯ ಗೊತ್ತಿದ್ದರೂ

DW : 1

ಉದ್ದೇಶಪೂರ್ವಕವಾಗಿ ವಾದಿಗಳ ಕಟ್ಟಡವನ್ನು ನೆಲಸಮ ಮಾಡಿದ್ದರೂ ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು, ಪುತ್ತೂರು